ಆ) ಒಟ್ಟು 497.

ಇ) ಭೂಸ್ವಾಧೀನಪಡಿಸಿಕೊಂಡಿರುವ ಖಾಸಗಿ ಜಮೀನುಗಳಿಗೆ ಐತೀರ್ಪು ಒಡಂಬಡಿಕೆ ಒಪ್ಪಂದದ ಮೇರೆಗೆ ನಿರ್ದರಿಸಿರುವ ಬೆಲೆಯಂತೆ ಪರಿಹಾರ ಧನ ಪಾವತಿ ಮಾಡಿದೆ. ಪುನರ್‌ವಸತಿದಾರರಿಗೆ ಜಿಲ್ಲಾಧಿಕಾರಿಗಳು ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ತೀರ್ಮಾನದಂತೆ 140 ಜನರಿಗೆ ನೇರ ಉದ್ಯೋಗ ಕೊಟ್ಟಿದ್ದು 302 ಜನರಿಗೆ ಪ್ರತಿ ಕುಟುಂಬಕ್ಕೆ ರೂ. 1.50 ಲಕ್ಷ ನಗದು ಪರಿಹಾರ ಧನವನ್ನು ನೇರ ಉದ್ಯೋಗದ ಬದಲು ನಗದು ಪರಿಹಾರ ಧನ ಪಾವತಿ ಮಾಡಲಾಗಿದೆ. ಎಂ.ಆರ್.ಪಿ.ಎಲ್. ಸಂಸ್ಥೆಯವರು ಇನ್ನೂ 55 ಕುಟುಂಬಗಳಿಗೆ ಪರಿಹಾರ ಧನ ಪಾವತಿ ಮಾಡಬೇಕಾಗಿರುತ್ತದೆ.

ವಿಷಯ: ದ.ಕ.ಜಿಲ್ಲೆಯಲ್ಲಿ ಸುಂಟರಗಾಳಿಯಿಂದ ಆದ ಅನಾಹುತಗಳು.

1041 (1435)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಮತ್ತು ಆಸುಪಾಸು ಪ್ರದೇಶಗಳಲ್ಲಿ ಆಕಸ್ಮಿಕವಾಗಿ ಬಂದ ಭೀಕರ ಸುಂಟರಗಾಳಿಯಿಂದ ಆದ ಅನಾಹುತಗಳಿಂದ ತೊಂದರೆಗೊಳಗಾದವರ ಸಂಖ್ಯೆ ಹಾಗೂ ಆದ ಒಟ್ಟು ನಷ್ಟ ಎಷ್ಟು?

ಆ) ಇದರ ಪರಿಹಾರಕ್ಕಾಗಿ ಸರ್ಕಾರದವರು ಒದಗಿಸಿದ ಮೊತ್ತವೆಷ್ಟು? ಹಾಗೂ ಸರ್ಕಾರದವರು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಸುಂಟರಗಾಳಿಯಿಂದ ತೊಂದರೆಗೊಳಗಾದವರು 585 ಮಂದಿ ಹಾಗೂ ಅಂದಾಜು ನಷ್ಟ ರೂ. 86.56 ಲಕ್ಷಗಳು ಇಷ್ಟಿದೆ.

ಆ) ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿಯಲ್ಲಿ ಬೆಳ್ತಂಗಡಿ ತಾಲ್ಲೂಕಿಗೆ ರೂ.5.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ವಾಸ್ತವ್ಯದ ಮನೆ ಹಾನಿಗೀಡಾದ 458 ಸಂತ್ರಸ್ಥರಿಗೆ ರೂ. 3.38 ಲಕ್ಷ ಹಣ ವಿತರಿಸಲಾಗಿದೆ. ಹಾಗೂ 97 ಹುಲ್ಲು ಛಾವಣಿ ಮನೆಗಳು ಹಾನಿಗೀಡಾದ ಬಗ್ಗೆ ರೂ. 2.00 ಲಕ್ಷ ಹಣ ವಿತರಿಸಲಾಗಿದೆ. ಅಲ್ಲದೆ, ವಾರ್ಷಿಕ ಆದಾಯ ರೂ. 18,000-00 ಮೀರಿದ 30 ಸಂತ್ರಸ್ಥರ ತೋಟಗಾರಿಕೆ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತಿಸಲು ಪರಿಶೀಲಿಸಲಾಗುತ್ತಿದೆ.